# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಲೆಕ್ಕ ಪತ್ರ ಸ್ಥಾಯಿ ಸಮಿತಿಯಲ್ಲಿ ದಿನಾಂಕ: 09–05–2017 ರಂದು ಮಧ್ಯಾಹ್ನ 3.00ಗಂಟೆಗೆ ನಡೆದ ಸಭೆಯ ನಡವಳಿಗಳು

| ಕ್ರ. ಸಂ | ಹಾಜರಿದ್ದ ಸದಸ್ಯರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1. | ನೇತ್ರಾ ನಾರಾಯಣ್ | – ಅಧ್ಯಕ್ಷರು | ಮುಖ್ಯ ಲೆಕ್ಕಾಧಿಕಾರಿಗಳು |
| 2. | ಸವಿತಾ ವಿ.ಕೃಷ್ಣ | – ಸದಸ್ಯರು | |
| 3. | ಎನ್.ಉಮಾ | – ಸದಸ್ಯರು | |
| 4. | ರಾಧಮ್ಮ ವೆಂಕಟೇಶ್ | – ಸದಸ್ಯರು | |
| 5. | ಜಿ.ಬಾಲಕೃಷ್ಣನ್ | – ಸದಸ್ಯರು | |
| 6. | ವಿ.ಸುರೇಶ್ | – ಸದಸ್ಯರು | |
| 7. | ಹೆಚ್.ಕುಸುಮಾ | – ಸದಸ್ಯರು | |
| 8. | ಎಂ.ಮಾಲತಿ | – ಸದಸ್ಯರು | |
| 9. | ಎಂ.ಶಾಮಲ | – ಸದಸ್ಯರು | |
| 10. | ಕೆ.ವಿ.ರಾಜೇಂದ್ರಕುಮಾರ್ | – ಸದಸ್ಯರು | |
| 11. | ಎಂ.ಗೌತಮ್ ಕುಮಾರ್ | – ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲಿಸಿಕೊಳ್ಳಲಾಯಿತು)

ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಸಮಿತಿಯ ಸದಸ್ಯರುಗಳಿಗೆ ಮತ್ತು ಅಧಿಕಾರಿ ಸ್ವಾಗತ ಕೋರಿ, ತಮ್ಮ ಪರಿಚಯವನ್ನು ಮಾಡಿಕೊಂಡು ನಂತರ ಸಮಿತಿಯ ಸದಸ್ಯರುಗಳು ಮತ್ತು ಅಧಿಕಾರಿಗಳಿಗೆ ಸಭೆಗೆ ತಮ್ಮ ಪರಿಚಯ ಮಾಡಿಕೊಳ್ಳುವಂತೆ ಕೋರಿದರು. ಅದರಂತೆ, ಹಾಜರಿದ್ದ ಸಮಿತಿಯ ಸದಸ್ಯರುಗಳು ಹಾಗೂ ಎಲ್ಲಾ ಅಧಿಕಾರಿಗಳು ಸಭೆಗೆ ತಮ್ಮ ಪರಿಚಯ ಮಾಡಿಕೊಂಡರು.

ಅಧ್ಯಕ್ಷರು ಮಾತನಾಡುತ್ತಾ ಸಮಿತಿಯು ಈಗಾಗಲೇ ಎಲ್ಲಾ ವಲಯಗಳ ಲೆಕ್ಕ ಪರಿಶೋಧನಾ ವರದಿಗಳಲ್ಲಿನ ವಸೂಲಾತಿ ಮತ್ತು ಅಕ್ಷೇಪಣೆಯಲ್ಲಿಟ್ಟಿರುವ ಮೊತ್ತ, ಬಾಕಿ ಇರುವ ಕಂಡಿಕೆಗಳಿಗೆ ಸಂಬಂಧಿಸಿದಂತೆ ಸಭೆ ನಡೆಸಿ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದ್ದು, ಈ ನಿಟ್ಟಿನಲ್ಲಿ ಯಾವ ಯಾವ ವಲಯಗಳಿಂದ ಅನುಸರಣಾ ವರದಿಯನ್ನು ಸ್ವೀಕರಿಸಲಾಗಿರುತ್ತದೆ ಎಂಬುದರ ಮಾಹಿತಿಯನ್ನು ಸಲ್ಲಿಸಲು ಸೂಚಿಸಿದರು. ಆಗ ಹಾಜರಿದ್ದ ಮುಖ್ಯ ಲೆಕ್ಕಾಧಿಕಾರಿಗಳು ಕೆಲವೊಂದು ವಲಯಗಳಿಂದ ಅನುಸರಣಾ ವರದಿಗಳು ಆಡಿಟ್ ಸೆಲ್ ವಿಭಾಗಕ್ಕೆ ಬಂದಿರುವುದಾಗಿ, ಅವುಗಳನ್ನು ಪರಿಶೀಲಿಸಿ ಸಮಿತಿಯ ಮುಂದೆ ಮಂಡಿಸಲು ಕ್ರಮ ಕೈಗೊಳ್ಳುತ್ತಿರುವುದಾಗಿ ತಿಳಿಸಿದರು.

ಮುಖ್ಯ ಲೆಕ್ಕಾಧಿಕಾರಿಗಳ ಕಛೇರಿಗೆ ಸಂಬಂಧಪಟ್ಟಂತೆ 1986–87 ರಿಂದ 2011–12ನೇ ಸಾಲಿನವರೆಗೆ ಒಟ್ಟ ರೂ.9,44,45,462/–ಗಳು ವಸೂಲಾತಿಗೆ ಹಾಗೂ ರೂ.350,19,79,574/–ಗಳನ್ನು ಆಕ್ಷೇಪಣೆಯಲಿಟ್ಟಿರುವುದು ತಿಳಿದು ಬಂದಿದ್ದು, ಈ ಬಗ್ಗೆ ಕೈಗೊಂಡಿರುವ ಕ್ರಮದ ಮಾಹಿತಿಯನ್ನು ಒದಗಿಸಲು ಸೂಚಿಸಿದಾಗ, ಮುಖ್ಯ ಲೆಕ್ಕಾಧಿಕಾರಿಗಳು ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಸರಣಾ ವರದಿಯನ್ನು ಸಲ್ಲಿಸಲು ಕ್ರಮ ಕೈಗೊಳ್ಳುತ್ತಿರುವುದಾಗಿ ಮಾಹಿತಿ ನೀಡುತ್ತಾ ಕಛೇರಿಯಲ್ಲಿ ಸಿಬ್ಬಂದಿಗಳ ಕೊರತೆ ಇದ್ದು, ಕಛೇರಿ ದಿನನಿತ್ಯದ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಕಷ್ಟಸಾಧ್ಯವಾಗುತ್ತಿರುವುದಾಗಿ ತಿಳಿಸಿದರು. ಆಗ ಅಧ್ಯಕ್ಷರು ಅಗತ್ಯ ಸಿಬ್ಬಂದಿಗಳನ್ನು ನಿಯೋಜಿಸುವಂತೆ ಆಡಳಿತ ಶಾಖೆಗೆ ಮನವಿ ಸಲ್ಲಿಸಲು ಸೂಚಿಸುತ್ತಾ, ಆಡಿಟ್ ವಿಷಯದಲ್ಲಿ ಅಧಿಕಾರಿಗಳೆಲ್ಲರೂ ತಾತ್ಸಾರ ಮನೋಭಾವನೆಯನ್ನು ಹೊಂದಿದ್ದು, ಆಡಿಟ್ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ತಿಳಿಸಿದರು.

ಮುಂದುವರಿದು ಅಧ್ಯಕ್ಷರು ಮಾತನಾಡುತ್ತಾ ಮುಖ್ಯ ಲೆಕ್ಕಾಧಿಕಾರಿಯವರ ಕಛೇರಿಯಲ್ಲಿ ಹಲವಾರು ಬದಲಾವಣೆಗಳನ್ನು ತರುವ ಅವಶ್ಯಕತೆ ಇದ್ದು, ಪಾಲಿಕೆಯಲ್ಲಿ ಲೆಕ್ಕಪತ್ರ ವಿಭಾಗಕ್ಕೆ ಸಂಬಂಧಿಸಿದಂತೆ ಒಂದು auditing firm ತೆರೆದು, ಪರಿಣಿತಿ ಹೊಂದಿರುವ ಚಾರ್ಟ್‌ಡ್ ಅಕೌಟೆಂಟ್‌ಗಳನ್ನು ನಿಯೋಜಿಸಿಕೊಂಡು, ಲೆಕ್ಕ ಪತ್ರ ವಿಭಾಗದಲ್ಲಿ ಸಂಪೂರ್ಣ ಬದಲಾವಣೆಯನ್ನು ತರಬೇಕೆಂದು ಸೂಚನೆ ನೀಡಿದರು. ಆಗ ಮುಖ್ಯ ಲೆಕ್ಕಾಧಿಕಾರಿಗಳು ಈಗಾಗಲೇ ಈ ಬಗ್ಗೆ ಕ್ರಮ ಕೈಗೊಳ್ಳುತ್ತಿರುವುದಾಗಿ, ಈ ನಿಟ್ಟಿನಲ್ಲಿ 3 ಸೆಲ್‌ಗಳನ್ನು Remittance cell, Tax cell & Re-conciliation cell ಗಳನ್ನು ತೆರೆಯಲು ಉದ್ದೇಶಿಸಲಾಗಿದ್ದು, ಇದಕ್ಕೆ ಸ್ಥಳಾವಕಾಶ ಹಾಗೂ ಮೂಲಭೂತ ಸೌಕರ್ಯಗಳ ಕೊರತೆ ಇರುವುದಾಗಿ ತಿಳಿಸಿದರು. ಅಲ್ಲದೆ FBAS ವಿಭಾಗದಲ್ಲಿ ಈಗಾಗಲೇ ಲೆಕ್ಕ ಪತ್ರ ನಿರ್ವಹಣೆಗೆ ಸಂಬಂಧಿಸದಿಂತೆ ಸಿಬ್ಬಂದಿಗಳನ್ನು ಕಾರ್ಯನಿರ್ವಹಿಸುತ್ತಿರುವುದಾಗಿ ತಿಳಿಸಿದಾಗ, ಸದಸ್ಯರಾದ ಶ್ರೀಯುತ ಗೌತಮ್ ಕುಮಾರ್ ರವರು ಸದರಿ ವಿಭಾಗದಲ್ಲಿ ಕಂಪ್ಯೂಟರ್ ಆಪರೇಟರ್‌ಗಳು ಕಾರ್ಯ ನಿರ್ವಹಿಸುತ್ತಿದ್ದು, ಅವರುಗಳು ಪರಿಣಿತರಾಗಿರುವುದಿಲ್ಲವೆಂದು ಸದರಿಯವರ ಸ್ಥಳದಲ್ಲಿ ಆಡಿಟರ್ಸ್‌ಗಳು ಕಾರ್ಯನಿರ್ವಹಿಸುವಂತೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು. ಒಟ್ಟಾರೆ ಲೆಕ್ಕಪತ್ರ ವಿಭಾಗದಲ್ಲಿ ಕೆಲವೊಂದು ಬದಲಾವಣೆಯನ್ನು ತರುವ ಅವಶ್ಯಕತೆ ಇದ್ದು, ಈ ಬಗ್ಗೆ ಮಾನ್ಯ ಆಯುಕ್ತರರೊಂದಿಗೆ ಚರ್ಚಿಸುವುದಾಗಿ ತಿಳಿಸಿದರು.

ನಂತರ ಅಧ್ಯಕ್ಷರು ಮಾತನಾಡುತ್ತಾ, ಪಾಲಿಕೆಯ ಕಾಮಗಾರಿ ವಿಭಾಗಕ್ಕೆ ಸಂಬಂಧಿಸಿದ ಬಿಲ್ಲುಗಳನ್ನು ಪಾವತಿಸಲು ಮಾನ್ಯ ಆಯುಕ್ತರು ಏಪ್ರಿಲ್ 2015 ರಿಂದ ಸೆಪ್ಟೆಂಬರ್ 2015ರ ಮಾಹೆಯ ಪಿ.ಓ.ಡಬ್ಲ್ಯೂ.ಕಾಮಗಾರಿಗಳ ಬಿಲ್ಲುಗಳನ್ನು ಪಾವತಿಸಲು ಆದೇಶಿಸಿದ್ದರೂ, ಒಂದೂವರೆ ತಿಂಗಳಾದರೂ

ಏಪ್ರಿಲ್ 2015ರ ಮಾಹೆಯ ಬಿಲ್ಲುಗಳನ್ನೇ ಪಾವತಿಸುತ್ತಿರುತ್ತಾರೆಂದು ಬಿಲ್ಲುಗಳ ವಿಲೇವಾರಿಯನ್ನು ಶೀಘ್ರವಾಗಿ ಮಾಡಲು ಮುಖ್ಯ ಲೆಕ್ಕಾಧಿಕಾರಿಯವರಿಗೆ ನಿರ್ದೇಶನ ನೀಡಬೇಕೆಂದು ಗುತ್ತಿಗೆದಾರರುಗಳು ಮನವಿಯನ್ನು ಸಲ್ಲಿಸಿದ್ದು, ಈ ಬಗ್ಗೆ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ ಎಂಬುದರ ಮಾಹಿತಿಯನ್ನು ನೀಡಲು ಕೇಳಿದಾಗ, ಮುಖ್ಯ ಲೆಕ್ಕಾಧಿಕಾರಿಯವರು ಸದರಿ ವಿಷಯವು ಈಗಾಗಲೇ ನಮ್ಮ ಗಮನಕ್ಕೆ ಬಂದಿದ್ದು ಪ್ರಸ್ತುತ ಮೇ 2015ರ ಮಾಹೆಯ ಬಿಲ್ಲುಗಳನ್ನು ಪಾವತಿಸುತ್ತಿದ್ದು, ಕೂಡಲೇ ಉಳಿದ ಮಾಹೆಗಳ ಬಿಲ್ಲುಗಳನ್ನು ಪಾವತಿಸಲಾಗುವುದೆಂದು ತಿಳಿಸಿದಾಗ, ಸದಸ್ಯರಾದ ಶ್ರೀಯುತ ಗೌತಮ್ ಕುಮಾರ್ ರವರು ಕಛೇರಿಗೆ ಇಬ್ಬರು ಲೆಕ್ಕಾಧೀಕ್ಷಕರುಗಳನ್ನು ನಿಯೋಜಿಸಿಕೊಂಡು ಶೀಘ್ರವೇ ಎಲ್ಲಾ ಬಿಲ್ಲುಗಳ ಪಾವತಿಗೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.

ಕೊನೆಯಲ್ಲಿ ಅಧ್ಯಕ್ಷರು ಮಾತನಾಡುತ್ತಾ, ಸಮಿತಿಯು ಕೋರಿರುವ ಎಲ್ಲಾ ಮಾಹಿತಿಗಳನ್ನು ಸಮಿತಿಗೆ ಸಲ್ಲಿಸಲು ಸೂಚಿಸುತ್ತಾ, ಲೆಕ್ಕ ಪರಿಶೋಧನಾ ವರದಿಗಳಲ್ಲಿನ ಬಾಕಿ ಕಂಡಿಕೆಗಳು, ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತಕ್ಕೆ ಸಂಬಂಧಿಸಿದಂತೆ ಅನುಸರಣಾ ವರದಿಯನ್ನು ಸಮಿತಿಗೆ ಸಲ್ಲಿಸಲು ಸೂಚಿಸುತ್ತಾ ಸಭೆಯನ್ನು ವಂದನೆಯೊಂದಿಗೆ ಮುಕ್ತಾಯಗೊಳಿಸಿದರು.

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ

**ಪ್ರತಿಯನ್ನು:**

1.ಪೂಜ್ಯ ಮಹಾಪೌರರು ರವರ ಅವಗಾಹನೆಗೆ ತರಲು ವಿಶೇಷ ಕರ್ತವ್ಯಾಧಿಕಾರಿ ರವರಿಗೆ ಕಳುಹಿಸಿದೆ.
2.ಮಾನ್ಯ ಉಪ ಮಹಾಪೌರ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸಿದೆ.
3.ಮಾನ್ಯ ಆಯುಕ್ತರು ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
4.ಮಾನ್ಯ ಆಡಳಿತ ಪಕ್ಷದ ನಾಯಕರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಮಾನ್ಯ ಜೆ.ಡಿ.ಎಸ್. ಪಕ್ಷದ ನಾಯಕರಿಗೆ ಮಾಹಿತಿಗಾಗಿ ಕಳುಹಿಸಿದೆ.
5.ಮುಖ್ಯ ಲೆಕ್ಕಾಧಿಕಾರಿಯವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
7.ಕಛೇರಿ ಕಡತಕ್ಕೆ